# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂ:496/2022

ಸಿ.ಡಬ್ಲೂ: 01 ಪಿಡಬ್ಲೂ:01

ಸಾಕ್ಷಿದಾರರ ಹೆಸರು: ತಳವಾರ ಪಕ್ಕೀರಪ್ಪ ತಂದೆ:ತಳವಾರ ಬಾಳಪ್ಪ
ವಯಸ್ಸು: 70 ವರ್ಷ
ಉದ್ಯೋಗ: ವ್ಯವಸಾಯ,
ಸಾಕೀನ: ನಡುವಿನಹಳ್ಳಿ.

ದಿ: **22-05-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆ: ಸ.ಸ.ಅ ರವರಿಂದ:

**ಆರೋಪಿತರು ನನ್ನ ಅಳಿಯಂದಿರು, ಚಾ.ಸಾ.02 ನನಗೆ ಪರಿಚಯ ಇರುವುದಿಲ್ಲ, ಚಾ.ಸಾ.03 ನನ್ನ ಹೆಂಡತಿ, ಚಾ.ಸಾ.04 ಮತ್ತು 5 ರವರ ಪರಿಚಯ ಇರುವುದಿಲ್ಲ, ಚಾ.ಸಾ.06 ಮತ್ತು 7 ರವರ ಪರಿಚಯ ಇದೆ.**

**02.** ಸುಮಾರು **4** ವರ್ಷಗಳ ಹಿಂದೆ ನಮ್ಮ ಜಮೀನಿನಲ್ಲಿ ನಾನು ಟ್ರ್ಯಾಕ್ಟರನಿಂದ ಹೊಲ ಹೊಡೆಯಲು ಹೋಗಿದ್ದಾಗ ಆರೋಪಿತರು ನಮ್ಮೊಂದಿಗೆ ಜಗಳ ತೆಗೆದಿರುತ್ತಾರೆ. ಸದರಿ ಜಮೀನಿನ ವಿಷಯವಾಗಿ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ನನ್ನ ಪರವಾಗಿ ಆದೇಶವಾಗಿದ್ದು, ಸದರಿ ಆದೇಶದಂತೆ ನಮ್ಮ ಜಮೀನಿನಲ್ಲಿ ಅಳತೆಗೆ ಬಂದಿದ್ದಾಗ ಜಗಳ ತೆಗೆದಿರುತ್ತಾರೆ. ಅಳತೆ ಮಾಡಲು ಬಂದಿದ್ದ ಭೂಮಾಪಕರ ಸರಪಳಿಯನ್ನು ಕಿತ್ತೊಗೆದು ಗಡಿ ಗುರುತಿನ ಕಲ್ಲುಗಳನ್ನು ಕಿತ್ತೆಸೆದಿರುತ್ತಾರೆ. ನನ್ನ ಉಳುಮೆಗೆ ಹರಕತ್ತು ಮಾಡಿರುತ್ತಾರೆ, ಆರೋಪಿತರು ಕಲ್ಲಿನಿಂದ ಹೊಡೆಯಲು ಬಂದಿರುತ್ತಾರೆ ಕೊಡಲಿಯಿಂದ ಹೊಡೆಯಲು ಬಂದಿರುತ್ತಾರೆ. ಕೂಡುಗೋಲಿನಿಂದ ಕಡಿಯಲು ಬಂದಿರುತ್ತಾರೆ. ಸದರಿ ಘಟನೆ ಕುರಿತು ಹಿರೇಹಡಗಲಿ ಪೊಲೀಸ್ ಠಾಣೆಗೆ ಹೋಗಿ ಆರೋಪಿತರ ವಿರುದ್ಧ ದೂರು ಸಲ್ಲಿಸಿರುತ್ತೇನೆ. ಸಾಕ್ಷಿಗೆ ತನ್ನ ಹೆಬ್ಬೆರಳಿನ ಗುರುತು ಇರುವ ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಹೆಬ್ಬೆರಳಿನ ಗುರುತನ್ನು ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯು ದೂರು ಆಗಿದ್ದು ಅದನ್ನು ನಿ.ಪಿ.**01** ಎಂದು ಗುರುತಿಸಲಾಯಿತು. ಸಾಕ್ಷಿಗೆ ತನ್ನ ಹೆಬ್ಬೆರಳಿನ ಗುರುತು ಇರುವ **2** ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳು ಸ್ಥಳ ಪಂಚನಾಮೆ ಮತ್ತು ಹಾತ್ ನಕಾಶೆಗಳಾಗಿದ್ದು ಅವುಗಳಲ್ಲಿರುವ ತನ್ನ ಹೆಬ್ಬೆರಳಿನ ಗುರುತುಗಳನ್ನು ನೋಡಿ

ಗುರುತಿಸಿದ್ದರಿಂದ ಸ್ಥಳ ಪಂಚನಾಮೆಯನ್ನು ನಿ.ಪಿ.**02** ಎಂದು ಹಾತ್ ನಕಾಶೆಯನ್ನು ನಿ.ಪಿ.**03** ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾ ಚಿತ್ರ ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಸದರಿ ಛಾಯಾ ಚಿತ್ರವನ್ನು ಪೊಲೀಸರು ಆರೋಪಿತರು ಹೊಡೆದಾಡಲು ಬಂದ ಸ್ಥಳದಲ್ಲಿ ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿ ಛಾಯಾ ಚಿತ್ರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿ.ಪಿ.**04** ಎಂದು ಗುರುತಿಸಲಾಯಿತು. ಸದರಿ ದಿನ ನನ್ನೊಂದಿಗೆ ಜಗಳ ಮಾಡಿದ ಆರೋಪಿತರು ಇಂದು ನ್ಯಾಯಾಲಯದ ಮುಂದೆ ಇರುತ್ತಾರೆ. ಇದಲ್ಲದೆ ಹೆಚ್ಚಿನ ಮಾಹಿತಿ ಈ ಪ್ರಕರಣದ ಬಗ್ಗೆ ಇರುವುದಿಲ್ಲ.

*(ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸ.ಸ.ಅ ವಕೀಲರು ಪಾಟೀ ಸವಾಲನ್ನು ಮಾಡಲು ನ್ಯಾಯಾಲಯದ ಅನುಮತಿ ಕೋರಿದ್ದು ಅನುಮತಿಯನ್ನು ನೀಡಿರುತ್ತಾರೆ.)*

ಪಾಟೀ ಸವಾಲು ಸ.ಸ.ಅ ರವರಿಂದ

**03.** ಹಿರೇಹಡಗಲಿ ಹೋಬಳಿ ಕೊತಲಕಟ್ಟೆ ಕಂದಾಯ ಗ್ರಾಮದ ಸರ್ವೇ ನಂಬರ **14** ವಿಸ್ತೀರ್ಣ **8.14** ರಲ್ಲಿ **4.07** ಎಕರೆ ಜಮೀನು ನನ್ನ ಸ್ವಯಾರ್ಜಿತ ಜಮೀನು ಆಗಿದೆ ಎಂದು ನನ್ನ ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ಜಮೀನನ್ನು ತಳವಾರ **SH** ಬಸಪ್ಪ ಈತನು ಆಸ್ತೀಯನ್ನು ಕಬಳಿಸಬೇಕೆಂಬ ದುರುದ್ದೇಶದಿಂದ ಮತ್ತು ನಾನು ಅನಕ್ಷರಸ್ಥನಾಗಿರುವುದರಿಂದ ಕಂದಾಯ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ತನ್ನ ಹೆಸರಿಗೆ ದಾಖಲೆಗಳನ್ನು ಮಾಡಿಸಿಕೊಂಡಿದ್ದನು ಎಂದು ದೂರಿನಲ್ಲಿ ಬರೆಸಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಗಳ ಅನ್ವಯ ಸದರಿ ಜಮೀನನ್ನು ಬಸಪ್ಪನ ಕಬ್ಜೆಗೆ ತೆಗೆದುಕೊಂಡಿದ್ದನು ಎಂದರೆ ಸರಿ. ನಂತರ ನಾನು ಸದರಿ ಬಸಪ್ಪನ ವಿರುದ್ಧ ಮಾನ್ಯ ಸಿವಿಲ್ ನ್ಯಾಯಾಲಯ ಹಡಗಲಿನಲ್ಲಿ ಅಸಲು ದಾವಾ ಸಂಖ್ಯೆ **38/2012** ರಂತೆ ದಾವೆ ಸಲ್ಲಿಸಿದ್ದೇನು ಎಂದರೆ ಸರಿ. ಸದರಿ ದಾವೆಯಲ್ಲಿ ನನ್ನ ಪರವಾಗಿ ಡಿಕ್ರಿ ಆಗಿತ್ತು ಎಂದರೆ ಸರಿ. ಸದರಿ ಡಿಕ್ರಿ ಅನ್ವಯ ಆರೋಪಿತರು ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯ ಹಡಗಲಿಯಲ್ಲಿ ಅಪೀಲು ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅಪೀಲು ವಜಾಗೊಂಡು ನನ್ನ ಪರವಾಗಿ ಆದೇಶವಾಗಿತ್ತು ಎಂದರೆ ಸರಿ. ಸದರಿ ಆದೇಶದಂತೆ ಬಸಪ್ಪನ ಕಡೆಯಿಂದ ಸದರಿ

ಜಮೀನನ್ನು ನನ್ನ ಕಬ್ಜೆಗೆ ಪಡೆಯಲು ಅಮಲ ಜಾರಿ ಅರ್ಜಿಯನ್ನು ಸಲ್ಲಿಸಿದ್ದೇನು ಎಂದರೆ ಸರಿ. ಸದರಿ ಅಮಲ ಜಾರಿ ಪ್ರಕರಣದಲ್ಲಿ ಕೋರ್ಟ್ ಕಮಿಷನರ್ ಮತ್ತು ಸರ್ವೇ ಕಮಿಷನರಗಳನ್ನು ನೇಮಕ ಮಾಡಿ ಅಳತೆಗಾಗಿ ಬಂದಿದ್ದರು ಎಂದರೆ ಸರಿ. ಅದರಂತೆ ದಿ.**20-11-2021** ರಂದು ಸದರಿ ಜಮೀನಿನ ಅಳತೆ ವ್ಯವಹಾರ ಮುಗಿಸಿ ನನ್ನ ಕಬ್ಜೆಗೆ ಗಡಿ ಗುರುತುಗಳನ್ನು ಹಾಕಿ ಕೊಡಿಸಿದ್ದರು ಎಂದರೆ ಸರಿ. ಸದರಿ ಮಾನ್ಯ ನ್ಯಾಯಾಲಯದ ಡಿಕ್ರಿಯಂತೆ ತಹಶೀಲ್ದಾರವರು ಪಹಣಿ ನಮೂದು ಮಾಡಿದ್ದರು ಎಂದರೆ ಸರಿ. ಸದರಿ ಮಾನ್ಯ ನ್ಯಾಯಾಲಯದ ಆದೇಶದಂತೆ **4.07** ಜಮೀನಿನ ಮಾಲೀಕತ್ವ ಘೋಷಣೆ ಮಾಡಿತ್ತು ಎಂದರೆ ಸರಿ. ಅದರಂತೆ ನಾನು ದಿ.**06-06-2022** ರಂದು ಬೆ.**09.00** ಗಂಟೆ ಸುಮಾರಿಗೆ ನನ್ನ ಕಬ್ಜೆಗೆ ಬಂದಿದ್ದ ಜಮೀನಿನಲ್ಲಿ ರಂಟೆ ಹೊಡೆಯಲು ಹೋಗಿದ್ದೇನು ಎಂದರೆ ಸರಿ. ಆ ದಿನ ಆರೋಪಿತರು ಅಕ್ರಮ ಪ್ರವೇಶ ಮಾಡಿ ನನ್ನನ್ನು ತಡೆದು ಕೈಯಲ್ಲಿ ಕೊಲು, ಕೊಡಲಿ ಕಲ್ಲುಗಳನ್ನು ಹಿಡಿದುಕೊಂಡು ಕೆ.ಕೆ ಹೊಡೆಯುತ್ತಾ ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿ. ಆ ದಿನ ನಾನು ರಂಟೆ ಹೊಡೆಯಲು ತೆಗೆದುಕೊಂಡು ಹೋಗಿದ್ದ ಟ್ರ್ಯಾಕ್ಟರನ್ನು ಸದರಿ ಜಮೀನಿಂದ ಹೊರಗಡೆ ಹಾಕಿದ್ದರು ಎಂದರೆ ಸರಿ. ಅದೇ ರೀತಿ ಆರೋಪಿತರು ನ್ಯಾಯಾಲಯದ ಆದೇಶವನ್ನು ದಿಕ್ಕರಿಸಿ ಜಮೀನಿನಲ್ಲಿ ಹಾಕಲಾಗಿದ್ದ ಗಡಿ ಗುರುತುಗಳ ಕಲ್ಲುಗಳನ್ನು ಕಿತ್ತು ಹಾಕಿರುತ್ತಾರೆ ಎಂದರೆ ಸರಿ. ಅದೇ ರೀತಿ ನನಗೆ ನೀನು ಇಲ್ಲೇ ನಿಂತರೆ ನಿನ್ನನ್ನು ಇಲ್ಲಿಯೇ ಮುಗಿಸಿಬಿಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಸದರಿ ಜಮೀನಿನ ಉಳುಮೆಗೆ ಅಡ್ಡಿಪಡಿಸಿ ಶಾಂತಿಯುತ ಸ್ವಾಧೀನಕ್ಕೆ ಹರಕತ್ತ ಮಾಡಿರುತ್ತಾರೆ ಎಂದರೆ ಸರಿ. ಸದರಿ ಘಟನೆ ಕುರಿತು ದಿ.**15-06-2022** ರಂದು ಆರೋಪಿತರ ವಿರುದ್ಧ ನಿ.ಪಿ.**01** ರಂತೆ ಪೊಲೀಸರಿಗೆ ದೂರು ಸಲ್ಲಿಸಿರುತ್ತೇನೆ ಎಂದರೆ ಸರಿ.

**04.** ಸದರಿ ಘಟನೆ ಕುರಿತು ಆರೋಪಿತರು ಜಗಳ ಮಾಡಿದ್ದ ನಮ್ಮ ಜಮೀನಿನಲ್ಲಿ ಕೃತ್ಯ ಸ್ಥಳವನ್ನು ನಾನು ತೋರಿಸಿದಂತೆ ಚಾ.ಸಾ.**06** ಮತ್ತು **07** ರವರ ಸಮಕ್ಷಮ ನಿ.ಪಿ.**02** ರಂತೆ ಸ್ಥಳ ಪಂಚನಾಮೆಯನ್ನು ಚಾ.ಸಾ.**11** ರವರು ಜರೂಗಿಸಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಪಂಚನಾಮೆಯೊಂದಿಗೆ ನಿ.ಪಿ.**03**

ರಂತೆ ಕೃತ್ಯ ಸ್ಥಳದ ಕಚ್ಛಾ ನಕಾಶೆಯನ್ನು ತಯಾರಿಸಿರುತ್ತಾರೆ ಎಂದರೆ ಸರಿ. ಸದರಿ ಪಂಚನಾಮೆ ಸಮಯದಲ್ಲಿ ಸ್ಥಳದಲ್ಲಿಯೇ ನಾನು ಹೆಬ್ಬೆರಳಿನ ಗುರುತುಗಳನ್ನು ಹಾಕಿರುತ್ತೇನೆ ಎಂದರೆ ಸರಿ. ಸದರಿ ಪಂಚನಾಮೆ ಸಮಯದಲ್ಲಿ ನಿ.ಪಿ.**04** ರಂತೆ ಛಾಯಾ ಚಿತ್ರ ತೆಗೆಸಿರುತ್ತಾರೆ ಎಂದರೆ ಸರಿ.

<u>ಪಾಟೀ ಸವಾಲು ಆರೋಪಿತರ ಪರ ಶ್ರೀ.**SGR** ವಕೀಲರವರಿಂದ</u>

**05.** ಯಾವ ದಿನಾಂಕದಂದು ಆರೋಪಿತರು ನನಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಹೇಳಲು ಬರುವುದಿಲ್ಲ. ಸಾಕ್ಷಿಯು ಮುಂದುವರೆದು **4** ವರ್ಷಗಳು ಆಗಿರುತ್ತದೆ ಎಂದು ಹೇಳಿರುತ್ತಾರೆ. ಹೊಲವನ್ನು ಉಳುಮೆ ಮಾಡಲು ತೆಗೆದುಕೊಂಡು ಹೋಗಿದ್ದ ಟ್ರ್ಯಾಕ್ಟರ ಸಂಖ್ಯೆಯನ್ನು ಹೇಳಲು ಬರುವುದಿಲ್ಲ. ಸದರಿ ಟ್ರ್ಯಾಕ್ಟರ ಯಾರದ್ದು ಎಂದು ಹೇಳಲು ಬರುವುದಿಲ್ಲ. ಆ ದಿನ ಬೆಳಿಗ್ಗೆಯಿಂದ ಮಧ್ಯಾಹ್ನ **03.00** ಗಂಟೆಯವರೆಗೆ ಜಗಳವಾಗಿರುತ್ತದೆ. ಆಗ ನಾನು ಚಾ.ಸಾ.**3** ಮತ್ತು ಆರೋಪಿತರು ಅಲ್ಲಿ ಇದ್ದೇವು.

**06.** ಆರೋಪಿತರು ಬಂದು ಹೊರಗೆ ದಬ್ಬಿದ ನಂತರ ನಾವು ಆ ದಿನವೇ ಠಾಣೆಗೆ ನಾನು ಮತ್ತು ಚಾ.ಸಾ.**3** ರವರು ಹೋಗಿರುತ್ತೇವೆ. ನಿ.ಪಿ.**01** ರಲ್ಲಿ ಏನು ಬರೆದಿರುತ್ತದೆ ಮತ್ತು ಅದನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಿ.ಪಿ.**01** ಕ್ಕೆ ಪೊಲೀಸರು ಹೆಬ್ಬೆಟ್ಟನ್ನು ಒತ್ತು ಎಂದಿದ್ದಕ್ಕೆ ನಾನು ಹೆಬ್ಬೆಟ್ಟನ್ನು ಒತ್ತಿರುತ್ತೇನೆ, ಅದರಲ್ಲಿ ಏನು ಬರೆದಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿ.

**07.** ಚಾ.ಸಾ.**3** ಆರೋಪಿತರ ಸೋದರತ್ತೇ ಎಂದರೆ ಸರಿ. ನಮ್ಮ ಸ್ವಂತ ಊರು ಬುದನೂರು. ಚಾ.ಸಾ.**3** ರವರನ್ನು ಮದುವೆಯಾದ ನಂತರ ಮನೆ ಅಳಿಯನಾಗಿ ನಡುವಿನಹಳ್ಳಿಗೆ ಅವರ ಮನೆಗೆ ಹೋಗಿರುತ್ತೇನೆ. ನಡುವಿನಹಳ್ಳಿಯಲ್ಲಿ ಆರೋಪಿತರು ಮತ್ತು ನಾವು ಕೂಡಿಕೊಂಡು ಬೇಸಾಯ ಮಾಡುತ್ತಿದ್ದೇವು ಎಂದರೆ ಸರಿ. ಹೀಗಾಗಿ ಆರೋಪಿತರು ನನಗೆ ಹೊಲ ಉಳುಮೆ ಮಾಡಲು ಅಡಚಣೆ ಮಾಡಿರುವುದಿಲ್ಲ, ನಾನು ಮತ್ತು ಚಾ.ಸಾ.**3** ರವರು ಸೇರಿಕೊಂಡು ಆರೋಪಿತರ ಮೇಲೆ ಸುಳ್ಳು ದೂರನ್ನು ನೀಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿತರು ಸರಪಳಿ ಮತ್ತು ಕಲ್ಲನ್ನು ಕಿತ್ತೊಗೆದಿರುತ್ತಾರೆ ಎಂದರೆ ಸರಿಯಲ್ಲ.

**08.** ನ್ಯಾಯಾಲಯದಿಂದ ಡಿಕ್ರಿಯಾದ ನಂತರ ನನ್ನ ಜಮೀನು ಮತ್ತು ಆರೋಪಿತರ ಜಮೀನಿನ ನಡುವೆ ವಡ್ಡನ್ನು ಹಾಕಿಸಿರುತ್ತೇವೆ ಎಂದರೆ ಸರಿ. ನಾನು ಪೊಲೀಸ್ ಠಾಣೆಯಲ್ಲಿ 4 ಬಾರಿ ಹೆಬ್ಬೆಟ್ಟನ್ನು ಒತ್ತಿರುತ್ತೇನೆ. ಗಲಾಟೆ ಆದ ದಿನವೇ ಠಾಣೆಗೆ ಹೋಗಿ ಹೆಬ್ಬೆಟ್ಟನ್ನು ಒತ್ತಿರುತ್ತೇನೆ ಎಂದರೆ ಸರಿ. ಆರೋಪಿತರು ಕುಡಗೋಲು, ಕೊಡ್ಲಿ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ಸುಮ್ಮನಿರುತ್ತಾರೆ. ಆರೋಪಿತರು ಹೊಡೆ-ಬಡೆ ಮಾಡಿದ್ದರ ಗಾಯಗಳು ಆಗಿರುವುದಿಲ್ಲ. ಆರೋಪಿತರು ಹೊಡೆ-ಬಡೆ ಮಾಡಿದ ನಂತರ ಆಸ್ಪತ್ರೆಗೆ ಹೋಗಿರುತ್ತೇನೆ. ಆರೋಪಿತರು ಕುಡಗೋಲು, ಕೊಡ್ಲಿ ಮತ್ತು ಕಲ್ಲಿನಿಂದ ಹೊಡೆದಿರುತ್ತಾರೆ ಎಂದು ನಾನು ಹೇಳಿರುವ ಹಾಗೆ ಸದರಿ ಕುಡಗೋಲು, ಕೊಡ್ಲಿ ಮತ್ತು ಕಲ್ಲನ್ನು ಪೊಲೀಸರಿಗೆ ನೀಡಿರುವುದಿಲ್ಲ. ನಿ.ಪಿ.04 ನ್ನು ಪೊಲೀಸರು ಠಾಣೆಯಲ್ಲಿ ಆರೋಪಿತರು ಜಗಳ ಮಾಡಿರುವುದಕ್ಕೆ ತೆಗೆದಿರುತ್ತಾರೆ. ಸಾಕ್ಷಿಯು ಮುಂದುವರೆದು ಹೊಲದಲ್ಲಿ ಫೋಟೋವನ್ನು ತೆಗೆದಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಮತ್ತು ಚಾ.ಸಾ.3 ರವರು ಸೇರಿಕೊಂಡು ಸುಳ್ಳು ದೂರನ್ನು ಸಲ್ಲಿಸಿ ನಾನು ಈ ದಿನ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ,

" ನನ್ನ ಸಮಕ್ಷಮ "

Sd/-

( ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾಯಿಕ ದಂಡಾಧಿಕಾರಿಗಳು., ಹಡಗಲಿ.

# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

ಸಿ.ಸಿ. ನಂಃ**496/2022**

**ಸಿ.ಡಬ್ಲೂಃ 02 ಪಿಡಬ್ಲೂಃ02**

ಸಾಕ್ಷಿದಾರರ ಹೆಸರುಃ ಬಾಳಪ್ಪನವರ ರಾಜಪ್ಪ ತಂದೆಃಕರಿಯಪ್ಪ
ವಯಸ್ಸುಃ 40 ವರ್ಷ
ಉದ್ಯೋಗಃ ಟ್ರ್ಯಾಕ್ಟರ ಚಾಲಕ,
ಸಾಕೀನಃ ಹೊಳಲು.

ದಿಃ **22-05-2026** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸ.ಸ.ಅ ರವರಿಂದಃ

**ಆರೋಪಿತರ ಪರಿಚಯ ಇರುತ್ತದೆ, ಚಾ.ಸಾ.01 ಮತ್ತು 3 ರಿಂದ 07 ರವರ ಪರಿಚಯ ಇರುವುದಿಲ್ಲ.**

**02.** ನಾನು ಯಾವುದೇ ಘಟನೆ ನೋಡಿಲ್ಲ, ಯಾವುದೇ ಜಗಳ ಬಿಡಿಸಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.

*( ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಸ.ಸ.ಅ ವಕೀಲರು ಪಾಟೀ ಸವಾಲನ್ನು ಮಾಡಲು ನ್ಯಾಯಾಲಯದ ಅನುಮತಿ ಕೋರಿದ್ದು ಅನುಮತಿಯನ್ನು ನೀಡಿರುತ್ತಾರೆ.)*

ಪಾಟೀ ಸವಾಲು ಸ.ಸ.ಅ ರವರಿಂದ

**03.** ನನ್ನ ಸ್ವಂತ ಊರು ಹೊಳಲು ಗ್ರಾಮವಾಗಿದ್ದು ನಾನು ನಮ್ಮ ಗ್ರಾಮದ ಸುತ್ತ ಮುತ್ತಲಿನ ಹಳ್ಳಿಜನರ ಹೊಲಗಳಲ್ಲಿ ಟ್ರ್ಯಾಕ್ಟರನಿಂದ ಬಾಡಿಗೆಗೆ ಉಳುಮೆ ಮಾಡಲು ಹೋಗುತ್ತೇನೆ ಎಂದರೆ ಸರಿ. ನಾನು ದಿ.**06-06-2022** ರಂದು ಬೆ.**09.00** ಗಂಟೆ ಸುಮಾರಿಗೆ ಚಾ.ಸಾ.**01** ರವರ ಜಮೀನಿನಲ್ಲಿ ಟ್ರ್ಯಾಕ್ಟರನಿಂದ ಉಳುಮೆ ಮಾಡಲು ಹೋಗಿದ್ದೇನು ಎಂದರೆ ಸರಿಯಲ್ಲ. ಆ ದಿನ ನಾನು ಟ್ರ್ಯಾಕ್ಟರ ತೆಗೆದುಕೊಂಡು ಹೋಗಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ದಿನದಂದು ಚಾ.ಸಾ.**1** ರವರಿಗೆ ಸೇರಿದ ಸರ್ವೆ ನಂಬರ **14** ರ **4.07** ಎಕರೆ ಜಮೀನಿನಲ್ಲಿ ಆರೋಪಿತರು ಆತನೊಂದಿಗೆ ಜಮೀನಿನ ವಿಷಯವಾಗಿ ಜಗಳ ತೆಗೆದರು ಎಂದರೆ ಸಾಕ್ಷಿಯು ನಾನು ಯಾವುದೇ ಘಟನೆ ನೋಡಿಲ್ಲ ಎಂದು ನುಡಿಯುತ್ತಾರೆ. ಅದೇ ದಿನ ಆರೋಪಿತರು ಚಾ.ಸಾ.**01** ರವರಿಗೆ ತಡೆದು ನಿಲ್ಲಿಸಿ ಅವಾಚ್ಯ ಶಬ್ಧಗಳಿಂದ

ಬೈದಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿತರು ಕೊಡಲಿ, ಕಲ್ಲು, ಕುಡುಗೋಲುಗಳನ್ನು ಹಿಡಿದುಕೊಂಡು ಬಂದು ಚಾ.ಸಾ.01 ರವರೊಂದಿಗೆ ಜಗಳ ತೆಗೆದು ಗಡಿ ಗುರುತು ಮಾಡಿದ ಕಲ್ಲುಗಳನ್ನು ಕಿತ್ತುಹಾಕಿರುತ್ತಾರೆ ಎಂದರೆ ಸರಿಯಲ್ಲ. ಆ ದಿನ ಆರೋಪಿತರು ಬಾಡಿಗೆಗೆ ಹೊಡೆಯಲು ಹೋಗಿದ್ದ ನನ್ನ ಟ್ರ್ಯಾಕ್ಟರನ್ನು ಚಾ.ಸಾ.01 ರವರ ಜಮೀನಿನಿಂದ ಹೊರಗಡೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿತರು ಚಾ.ಸಾ.01 ರವರಿಗೆ ಜೀವ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಆರೋಪಿತರು ಚಾ.ಸಾ.01 ರವರಿಗೆ ಮಾನ್ಯ ನ್ಯಾಯಾಲಯದ ಆದೇಶವಿದ್ದರೂ ಸಹ ಸಾಗುವಳಿಗೆ ತಂಟೆ ತಕರಾರು ಮಾಡಿ ತೊಂದರೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಘಟನೆ ಕುರಿತು ಚಾ.ಸಾ.01 ರವರು ಆರೋಪಿತರ ವಿರುದ್ಧ ಪೊಲೀಸ್ ಠಾಣೆಗೆ ದೂರು ಸಲ್ಲಿಸಿರುತ್ತಾರೆ ಎಂಬ ಮಾಹಿತಿ ನನಗೆ ಗೊತ್ತಾಗಿರುತ್ತದೆ ಎಂದರೆ ಸರಿಯಲ್ಲ. ಎಲ್ಲಾ ಮಾಹಿತಿ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯವಾಗಲೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಘಟನೆ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ.ಪಿ.05 ಎಂದು ಗುರುತಿಸಲಾಯಿತು. ನಾನು ಹೇಳಿಕೆಯನ್ನು ನೀಡಿದ್ದರೂ ಸಹ ಆರೋಪಿತರಿಗೆ ಅನೂಕೂಲ ಆಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೆ. ಕೇ. ಸರಿ ಇದೆ, " ನನ್ನ ಸಮಕ್ಷಮ "

Sd/-

( ಶ್ರೀಮತಿ ಅಕ್ಷತಾ ಟಿ )
ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ. ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.